ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ

ದಿನಾಂಕ : DATE : 16/1/21

# ರಾಮಮಂದಿರಕ್ಕೆ ರಾಷ್ಟ್ರಪತಿ ₹5 ಲಕ್ಷ ದೇಣಿಗೆ

ವಿ.ವಾ. 16-1-2021



**ನವದೆಹಲಿ:** ಅಯೋಧ್ಯೆಯಲ್ಲಿ ತಲೆಯೆತ್ತಲಿರುವ ಭವ್ಯ ರಾಮಮಂದಿರ ನಿರ್ಮಾಣ ಕಾರ್ಯಕ್ಕೆ ವಂತಿಗೆ ಸಂಗ್ರಹಿಸುವ ಅಭಿಯಾನವನ್ನು ಶ್ರೀ ರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್ ಆರಂಭಿಸಿದೆ. ರಾಷ್ಟ್ರಪತಿ ರಾಮನಾಥ ಕೋವಿಂದ ಶುಕ್ರವಾರ ಐದು ಲಕ್ಷದ ಒಂದು ನೂರು ರೂಪಾಯಿ ದೇಣಿಗೆ ನೀಡುವ ಮೂಲಕ ಅಭಿಯಾನಕ್ಕೆ ಚಾಲನೆ ನೀಡಿದರು. ಅನೇಕ ರಾಜಕೀಯ ಪಕ್ಷಗಳು ಮತ್ತು ಧಾರ್ಮಿಕ ಸಂಘಟನೆಗಳ ನಾಯಕರು 'ಸಮರ್ಪಣ ನಿಧಿ ಸಂಗ್ರಹ ಅಭಿಯಾನ'ಕ್ಕೆ ಕೈ ಜೋಡಿಸಿದ್ದು ದೇಶಾದ್ಯಂತ ಫೆ.27ರ ವರೆಗೆ ದೇಣಿಗೆ ಸಂಗ್ರಹ ಮುಂದುವರಿಯಲಿದೆ. ಅಭಿಯಾನದ ಮೊದಲ ದಿನವೇ ಹಣದ ಹೊಳೆ ಹರಿಯಲು ಆರಂಭವಾಗಿದೆ. ಟ್ರಸ್ಟ್ ಪರವಾಗಿ ಅದರ ಸಹ-ಅಧ್ಯಕ್ಷ ಗೋವಿಂದ್ ದೇವ್ ಗಿರೀಜಿ ಮಹಾರಾಜ್ ರಾಷ್ಟ್ರಪತಿ ಕೋವಿಂದರನ್ನು ಭೇಟಿಯಾಗಿ ದೇಣಿಗೆ ಪಡೆದರು. ವಿಶ್ವ ಹಿಂದು ಪರಿಷದ್ ಕಾರ್ಯಾಧ್ಯಕ್ಷ ಅಲೋಕ್ ಕುಮಾರ್, ಮಂದಿರ ನಿರ್ಮಾಣ ಸಮಿತಿ ಅಧ್ಯಕ್ಷ ನೃಪೇಂದ್ರ ಮಿಶ್ರಾ, ಆರ್‌ಎಸ್‌ಎಸ್ ನಾಯಕ ಕುಲಭೂಷಣ್ ಅಹುಜಾ ಇದ್ದರು.

● ಪುಟ

# ರಾಷ್ಟ್ರಪತಿಯಿಂದ ₹5 ಲಕ್ಷ ದೇಣಿಗೆ

ವಿ.ವಾ. 16-1-2021

ಮೊದಲನೇ ಪುಟದಿಂದ...

**11 ಕೋಟಿ ರೂ. ದೇಣಿಗೆ:** ಗುಜರಾತ್‌ನ ಸೂರತ್‌ನ ವಜ್ರ ವ್ಯಾಪಾರಿ ಗೋವಿಂದ ಧೋಲಾಕಿಯಾ 11 ಕೋಟಿ ರೂಪಾಯಿ, ಮಹೇಶ್ ಕಬೂತರ್‌ವಾಲಾ ಐದು ಕೋಟಿ ರೂ. ಹಾಗೂ ಲವೇಜಿ ಬಾದ್‌ಷಾ ಒಂದು ಕೋಟಿ ರೂ. ದೇಣಿಗೆ ನೀಡಿದ್ದಾರೆ.

**ಮೂರು ಕೂಪನ್‌ಗಳು ಮುದ್ರಣ:** 10, 100 ಮತ್ತು 1000 ರೂ. ಮೌಲ್ಯದ ಕೂಪನ್‌ಗಳನ್ನು ಮುದ್ರಿಸಲಾಗಿದೆ. ಮನೆ ಮನೆಗೆ ತೆರಳಿ ಜನರಿಂದ ಹಣ ಸಂಗ್ರಹಿಸಲು ಯೋಜಿಸಲಾಗಿದೆ. ಸರ್ಕಾರದಿಂದ, ವಿದೇಶಗಳಿಂದ ಅಥವಾ ಕಾರ್ಪೊರೇಟ್ ಕಂಪನಿಗಳಿಂದ ವಂತಿಗೆ ಪಡೆಯದಿರಲು ನಿರ್ಣಯಿಸಲಾಗಿದೆ.